**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC.No.465/2023**

**Cw-8 Pw-4**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಲ್ಲಿಕಾರ್ಜುನಯ್ಯ ತಂದೆ ಪ್ರಭಯ್ಯಸ್ವಾಮಿ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಜೀವನ |
| ವಾಸಸ್ಥಳ | : | ರಾಯಚೂರು |
| ಪ್ರಮಾಣೀಕರಿಸಿದ ದಿನಾಂಕ | : | 04-04-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು ದಿನಾಂಕ 22-06-2012 ರಿಂದ 2019 ರ ವರೆಗೆ ಗಬ್ಬೂರು ಪೊಲೀಸ ಠಾಣೆಯಲ್ಲಿ ಪೊಲೀಸ ಮುಖ್ಯಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **29-01-2017** ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ **5-00** ಗಂಟೆಗೆ ಚಾಸಾ**-1** ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆಯ ಪಿರ್ಯಾದಿಯ ಸಾರಾಂಶದ ಮೇಲೆ ಠಾಣಾ ಗುನ್ನಾ ನಂಬರ **7/2017** ರಲ್ಲಿ ಪ್ರಕರಣ ದಾಖಲಿಸಿಕೊಂಡು**,** ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ**.** ದಿನಾಂಕ **30-01-2017** ರಂದು ಬೆಳಿಗ್ಗೆ **9-30** ರಿಂದ **10-30** ಗಂಟೆಯ ಅವಧಿಯಲ್ಲಿ ಚಾಸಾ**-2** ಮತ್ತು **3** ರವರ ಸಮಕ್ಷಮ ಚಾಸಾ**-1** ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಎರಡು ಬಡಿಗೆಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ**.** ನಂತರ ಅದೇ ದಿನ ಚಾಸಾ**-4** ರಿಂದ **6** ರವರ ಹೇಳಿಕೆಯನ್ನು ಪಡೆದಿರುತ್ತೇನೆ**.** ಚಾಸಾ**-6** ರವರನ್ನು ದಿನಾಂಕ **30-01-2017** ರಂದು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿರುತ್ತೇನೆ**.** ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ**-9** ರವರಿಗೆ ನೀಡಿರುತ್ತೇನೆ**.**

ನಿಪಿ**-1** ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ**-1(**ಬಿ**)** ಎಂದು ಗುರುತಿಸಲಾಯಿತು**.** ಪಂಚನಾಮೆಯನ್ನು ನಿಪಿ**-4** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ**-4(**ಎ**)** ಎಂದು ಗುರುತಿಸಲಾಯಿತು**.** ಪ್ರಥಮ ವರ್ತಮಾನ ವರದಿಯನ್ನು ನಿಪಿ**-5** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ**-5(**ಎ**)** ಎಂದು ಗುರುತಿಸಲಾಯಿತು**.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಎನ್ ವಕೀಲರಿಂದ.**

ಚಾಸಾ-1 ರವರೊಂದಿಗೆ ಠಾಣೆಗೆ ಯಾರು ಬಂದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ-1 ರವರು ಠಾಣೆಗೆ 5-00 ಗಂಟೆಗೆ ದೂರು ನೀಡಲು ಬಂದಿರುತ್ತಾರೆ. ಚಾಸಾ-1 ರವರು

ಹೇಳಿಕೆಯ ದೂರನ್ನು ನೀಡಿರುತ್ತಾರೆ. ಪಂಚನಾಮೆ ಮಾಡಿದ ಸ್ಥಳವು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ. ಪಂಚರನ್ನು ನಾನೇ ಬರಮಾಡಿಕೊಂಡಿರುತ್ತೇನೆ. ಮಸರಕಲ್‌ನ ಕನಕವೃತ್ತದಲ್ಲಿ ನಿಂತಿದ್ದವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುತ್ತೇನೆ. ಸದರಿ ಕನಕ ವೃತ್ತದಿಂದ ಗುಂಟ್ರಾಳ ಗ್ರಾಮಕ್ಕೆ ಹೋಗುವ ದಾರಿ ಇದೆ ಎಂದರೆ ನನಗೆ ಗೊತ್ತಿಲ್ಲ. ದೇವದುರ್ಗದಿಂದ ಮಸರಕಲ್ ಗ್ರಾಮಕ್ಕೆ ಹೋಗುವಾಗ ಮಸರಕಲ್ ಗ್ರಾಮದಲ್ಲಿ ಮೊದಲಿಗೆ ಬಸವ ವೃತ್ತ ಬರುತ್ತದೆ ಎಂದರೆ ಸರಿ. ಚಾಸಾ-4 ಮತ್ತು 5 ರವರ ಹೇಳಿಕೆಯನ್ನು ಘಟನಾ ಸ್ಥಳದಲ್ಲಿ ಪಡೆದಿರುತ್ತೇನೆ. ಅಮಾನತುಪಡಿಸಿಕೊಂಡ ಕಟ್ಟಿಗೆಗಳು ಯಾವ ಜಾತಿಗೆ ಸೇರಿದ ಕಟ್ಟಿಗೆಗಳು ಆಗಿರುತ್ತವೆ ಎಂದು ನನಗೆ ಹೇಳಲಾಗುವುದಿಲ್ಲ.

ದಿನಾಂಕ **29-01-2017** ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ **5-00** ಗಂಟೆಗೆ ಚಾಸಾ-**1** ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆಯ ಪಿರ್ಯಾದಿಯ ಸಾರಾಂಶದ ಮೇಲೆ ಠಾಣಾ ಗುನ್ನಾ ನಂಬರ **7/2017** ರಲ್ಲಿ ಪ್ರಕರಣ ದಾಖಲಿಸಿಕೊಂಡು**,** ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡು**,** ದಿನಾಂಕ **30-01-2017** ರಂದು ಬೆಳಿಗ್ಗೆ **9-30** ರಿಂದ **10-30** ಗಂಟೆಯ ಅವಧಿಯಲ್ಲಿ ಚಾಸಾ-**2** ಮತ್ತು **3** ರವರ ಸಮಕ್ಷಮ ಚಾಸಾ-**1** ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಎರಡು ಬಡಿಗೆಗಳನ್ನು ಅಮಾನತುಪಡಿಸಿಕೊಂಡು**,** ನಂತರ ಅದೇ ದಿನ ಚಾಸಾ-**4** ರಿಂದ **6** ರವರ ಹೇಳಿಕೆಯನ್ನು ಪಡೆದು**,** ಚಾಸಾ-**6** ರವರನ್ನು ದಿನಾಂಕ **30-01-2017** ರಂದು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿ**,** ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-**9** ರವರಿಗೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ**.** ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ**.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.